No. 1886
Date
Secretary to Government
(Disaster Management, Bhoomi & UPOR)

# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7076/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 27/02/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಎ.ಶಿವರಾಮ ಶ್ರೀಯಾನ್, ವಕೀಲರು, ಮೂಡುಗರಡಿ ರಸ್ತೆ, ಆಕಾಶವಾಣಿ ಹತ್ತಿರ, ಬ್ರಹ್ಮಾವರ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಎ.ಶಿವರಾಮ ಶ್ರೀಯಾನ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ತಾಲ್ಲೂಕು ಐರೋಡಿ ಗ್ರಾಮದ ಕಡ್ಡಿಮನೆ ಶ್ರೀಜುಮಾದಿ ಪಂಜುರ್ಲಿ ದೇವಸ್ಥಾನದ ಜೀರ್ಣೋದ್ದಾರದ ಬಗ್ಗೆ ಆಗಿನ ಮುಜರಾಯಿ ಸಚಿವರಾದ ಶ್ರೀ ಶ್ರೀನಿವಾಸ ಪೂಜಾರಿಯವರಿಗೆ ಮನವಿ ಸಲ್ಲಿಸಿದ್ದು ನಂತರ ಈ ವಿಚಾರದಲ್ಲಿ ಧಾರ್ಮಿಕ ದತ್ತಿ ಇಲಾಖೆಯಲ್ಲಿ ಸಂಪರ್ಕಿಸಿದಾಗ ಹಲವು ದಾಖಲೆಗಳನ್ನು ಸಲ್ಲಿಸಲು ತಿಳಿಸಿದ್ದರೂ, ಅದರಂತೆ, ದಾಖಲೆಗಳನ್ನು ಅರ್ಜಿಯೊಡನೆ ಸಲ್ಲಿಸಲು ಹೋದಾಗ ಸದರಿ ಇಲಾಖೆಯವರು ಅರ್ಜಿಯನ್ನು ಸ್ವೀಕರಿಸಲು ನಿರಾಕರಿಸಿರುತ್ತಾರೆ ಹಾಗೂ ದೇವಸ್ಥಾನಕ್ಕೆ ಯಾವುದೇ ರೀತಿ ಮಂಜೂರಾತಿ ಆಗಿಲ್ಲವೆಂದು ತಿಳಿಸಿರುತ್ತಾರೆ. ಆನಂತರ, ಕಡ್ಡಿಮನೆ ಶ್ರೀಜುಮಾದಿ ಪಂಜುರ್ಲಿ ದೇವಸ್ಥಾನಕ್ಕೆ ಮಂಜೂರಾದ ಹಣವನ್ನು ಅದೇ ಹೈರೋಳಿ ಗ್ರಾಮದ ಗುಡ್ಡಿ ಮನೆಯ ಜುಮಾದಿ ಪಂಜುರ್ಲಿ ದೇವಸ್ಥಾನ (ವರ್ತೆ ಪಂಜುರ್ಲಿ ದೇವಸ್ಥಾನಕ್ಕೆ) ಹಣ ನೀಡಿರುತ್ತಾರೆಂದು, ಇದರಿಂದ ಸದರಿ ಎದುರುದಾರರು ಸದರಿ ದೇವಸ್ಥಾನದವರೊಡನೆ ಶಾಮೀಲಾಗಿ ದೂರುದಾರರ ದೇವಸ್ಥಾನಕ್ಕೆ ಮಂಜೂರಾಗಿದ್ದ ಹಣವನ್ನು ಲಪಟಾಯಿಸಿರುತ್ತಾರೆಂದು, ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಎದುರುದಾರರು ಮಾಡಿರುವ ಆರೋಪಗಳೆಲ್ಲವೂ ಆಧಾರರಹಿತವಾಗಿರುತ್ತದೆ ಎಂದು ತಾನು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಧಾರ್ಮಿಕ ದತ್ತಿ ತಹಶೀಲ್ದಾರ್‌ಎಂದು ಕರ್ತವ್ಯ ನಿರ್ವಹಿಸುತ್ತಿದ್ದು, ಕಛೇರಿ ವಿಷಯ ನಿರ್ವಾಹಕರು ಮಂಡಿಸಿದ ಕಡತವನ್ನು ಪರಿಶೀಲಿಸಿ, ಅಪರ ಜಿಲ್ಲಾಧಿಕಾರಿಗಳ ಮೂಲಕ ಜಿಲ್ಲಾಧಿಕಾರಿಗಳಿಗೆ ಕಡತವನ್ನು ಮಂಡಿಸಿ ಕ್ರಮ ಜರುಗಿಸಲಾಗಿರುತ್ತದೆ. 2012–13ನೇ ಸಾಲಿನಲ್ಲಿ ಸರ್ಕಾರದಿಂದ ವಿವಿಧ ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಮಂಜೂರಾಗಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸ್ವೀಕೃತವಾಗಿರುತ್ತದೆ. ಅದರಂತೆ, ಸರ್ಕಾರದ ಆದೇಶ ಸಂ:ಕಂಇ.389.ಮುಅಬಿ.2012 ದಿನಾಂಕ:02/01/2013 ರ ಪ್ರಕಾರ ಉಡುಪಿ ತಾಲ್ಲೂಕು ಐರೋಡಿ ಗ್ರಾಮದ ಕಡ್ಡಿಮನೆ ಶ್ರೀಜುಮಾದಿ ಪಂಜುರ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ರೂ.2.00 ಲಕ್ಷ ಅನುದಾನ ಮಂಜೂರಾಗಿರುತ್ತದೆ. ಮಂಜೂರಾದ ಅನುದಾನ ಬಿಡುಗಡೆ ಮಾಡುವ ಬಗ್ಗೆ ಶ್ರೀ ಜುಮಾದಿ ಪಂಜುರ್ಲಿ ದೇವಸ್ಥಾನದ, ಗುಡ್ಡಿಮನೆ, ಐರೋಡಿ, ಉಡುಪಿ ತಾಲ್ಲೂಕು ಇದರ ಅಧ್ಯಕ್ಷರು ದಿ:20/07/2013 ರಂದು ಅಂದಾಜು ಪಟ್ಟಿ, ಪಟ್ಟದಾರರ ಒಪ್ಪಿಗೆ ಪತ್ರ, ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ನೀಡಿರುವ ಕಟ್ಟಡ ಪರವಾನಗೆ ಪತ್ರದೊಂದಿಗೆ ಸರ್ಕಾರದಿಂದ ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ವಿಷಯ ನಿರ್ವಾಹಕರು ಪರಿಶೀಲಿಸಿ ಮಂಡಿಸಿದ್ದು, ಸರ್ಕಾರದ ಆದೇಶ ಮತ್ತು ಪ್ರಸ್ತಾವನೆಯಲ್ಲಿಯ ದೇವಸ್ಥಾನದ ಹೆಸರು ಶ್ರೀ ಜುಮಾದಿ ಪಂಜುರ್ಲಿ ದೇವಸ್ಥಾನ, ಐರೋಡಿ ಗ್ರಾಮ ಎಂದು ಇರುತ್ತದೆ. ಈ ದೇವಸ್ಥಾನದ ಹೆಸರಿನ ಜೊತೆ ಇರುವ 'ಕಡ್ಡಿ ಮನೆ' ಮತ್ತು 'ಗುಡ್ಡಿ ಮನೆ' ಎಂಬ ಅಕ್ಷರ ಮಾಲೆಯಲ್ಲಿ ವ್ಯತ್ಯಾಸ ವಿರುತ್ತದೆ. ಕಡ್ಡಿ ಮನೆ ಮತ್ತು ಗುಡ್ಡಿ ಮನೆ ಎಂಬ ಬಗ್ಗೆ ಅಧಿಕೃತ ದಾಖಲಾತಿ ಇರುವುದಿಲ್ಲ. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ನೀಡಿದ ಕಟ್ಟಡ ಅನುಮತಿ ಪತ್ರದಲ್ಲಿ ದೇವಸ್ಥಾನದ ಮತ್ತು ಗ್ರಾಮದ ಹೆಸರನ್ನು ಉಲ್ಲೇಖಿಸಲ್ಪಟ್ಟಿದು, ಕಡ್ಡಿ ಮನೆ ಅಥವಾ ಗುಡ್ಡಿ ಮನೆ ಎನ್ನುವುದನ್ನು ಉಲ್ಲೇಖಿಸಿರುವುದಿಲ್ಲ. ಈ ದಾಖಲೆಗಳನ್ನು ಪರಿಶೀಲಿಸಿ ಅನುದಾನವನ್ನು ಬಿಡುಗಡೆ ಕುರಿತು ಕ್ರಮ ವಹಿಸಲಾಗಿರುತ್ತದೆ. ಸದರಿ ಅನುದಾನವನ್ನು ಬಿಡುಗಡೆ ಪೂರ್ವದಲ್ಲಿ ಕಾಮಗಾರಿಯ ಬಗ್ಗೆ ಸ್ಥಳ ತನಿಖಾ ವರದಿಯನ್ನು ಇಲಾಖಾ ಪರಿವೀಕ್ಷಕರು/ಕಾರ್ಯನಿರ್ವಾಹಣಾಧಿಕಾರಿಯವರಿಂದ ವರದಿ ಪಡೆಯಲಾಗಿರುತ್ತದೆ. ತದನಂತರ, ಜಿಲ್ಲಾಧಿಕಾರಿಯವರ ದಿ:18/11/2013ರ ಆದೇಶದಂತೆ ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸರ್ಕಾರದಿಂದ ಅನುದಾನ ಮಂಜೂರಾತಿ ಕೋರಿ ತಮ್ಮ ಕಛೇರಿ ಮೂಲಕ ಮನವಿಯನ್ನು ಸಲ್ಲಿಸಿರುವುದಿಲ್ಲ. ಸರ್ಕಾರದಿಂದ ಮಂಜೂರಾದ ಅನುದಾನವನ್ನು ಅರ್ಜಿದಾರರ ಸಂಸ್ಥೆಗೆ ಬಿಡುಗಡೆಯಾದ ಒಂದು ವರ್ಷದ ನಂತರ ದೂರುದಾರರು ದೂರು ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ, ಆರೋಪಗಳು ನಿರಾಧಾರವಾಗಿರುತ್ತವೆ ಎಂದು ತಿಳಿಸಿರುತ್ತಾರೆ. ಹಾಗೂ ತಮ್ಮ

ಜನ್ಮ ದಿನಾಂಕವನ್ನು ದಿನಾಂಕ:22/07/1956 ಎಂದು ನೀಡಿರುತ್ತಾರೆ (ಇವರ ನಿವೃತ್ತಿ ದಿನಾಂಕವನ್ನು ಕಂದಾಯ ಇಲಾಖೆಯಲ್ಲಿ ವಿಚಾರಿಸಲಾಗಿ ಸದರಿಯವರು ದಿನಾಂಕ 31/07/2016 ರಂದು ನಿವೃತ್ತಿಯಾಗಿರುವುದಾಗಿ ತಿಳಿಸಿರುತ್ತಾರೆ).

3. ಸದರಿ ಆಕ್ಷೇಪಣೆಯ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಎದುರುದಾರರು ಆಕ್ಷೇಪಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದು, ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ತಿಳಿಸಿರುತ್ತಾರೆ.

4. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ದೂರುದಾರರ ದೇವಸ್ಥಾನವು ಉಡುಪಿ ತಾಲ್ಲೂಕಿನ ಐರೋಡಿ ಗ್ರಾಮದ ಕಡ್ಡಿ ಮನೆ ಶ್ರೀ ಜುಮಾದಿ ಪಂಜುರ್ಲಿ ದೇವಸ್ಥಾನವಾಗಿರುತ್ತದೆ ಎಂದು ಕಂಡು ಬರುತ್ತದೆ. ಸದರಿ ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ: ಸಂ:ಕಂಇ.389.ಮುಅಬಿ.2012 ದಿನಾಂಕ:02/01/2013 ರ ಆದೇಶದ ಪ್ರಕಾರ, ಸದರಿ ಕಡ್ಡಿ ಮನೆ ಜುಮಾದಿ ಪಂಜುರ್ಲಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ರೂ.2.00 ಲಕ್ಷ ಹಣವನ್ನು ಮಂಜೂರುಮಾಡಿರುವುದು ಕಂಡು ಬರುತ್ತದೆ. ಸದರಿ ಆದೇಶದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಆದೇಶದ ಪ್ರತಿಯಲ್ಲಿ ಕ್ರ.ಸಂ.125 ರಲ್ಲಿ ಉಡುಪಿ ತಾಲ್ಲೂಕು ಐರೋಡಿ ಗ್ರಾಮದ ಕಡ್ಡಿ ಮನೆ ಶ್ರೀ ಜುಮಾದಿಪಂಜುರ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆಂದು ಮಾನ್ಯ ಸರ್ಕಾರದಿಂದ ರೂ.2.00 ಲಕ್ಷವನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಹಣವನ್ನು ಶ್ರೀ ಎಂ.ಸಂಜೀವ ಮರೋಡಿ ಇವರು ಐರೋಡಿ ಗುಡ್ಡಿ ಮನೆ ದೇವಸ್ಥಾನದ ಪರವಾಗಿ ರೂ.2.00 ಲಕ್ಷ ಹಣವನ್ನು ಚೆಕ್ ಮೂಲಕ ಸ್ವೀಕರಿಸಿರುವ ಬಗ್ಗೆ ಮಾಹಿತಿ ಹಕ್ಕಿನಡಿ ಪಡೆದಿರುವ ಮಾಹಿತಿಯಿಂದ ಕಂಡು ಬರುತ್ತದೆ. ಸದರಿ ಮಾಹಿತಿ ಹಕ್ಕಿನ ಪ್ರತಿಯನ್ನು ಹಾಜರುಪಡಿಸಲಾಗಿದೆ. ದೂರುದಾರರ ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಪ್ರಸ್ತಾವನೆಯನ್ನು ಮುಜರಾಯಿ ಸಚಿವರ ಮೂಲಕ ಸಲ್ಲಿಸಿರುವ ಬಗ್ಗೆ ಪ್ರಸ್ತಾವನೆಯ ಪ್ರತಿಯನ್ನು ಹಾಜರುಪಡಿಸಲಾಗಿದೆ ಹಾಗೂ ಅಂದಾಜು ಪಟ್ಟಿಯನ್ನು ಹಾಜರುಪಡಿಸಲಾಗಿದೆ. ಇದಲ್ಲದೇ, ಸರ್ಕಾರದ ಮೇಲೆ ಹೇಳಿದ ಆದೇಶ ಸಂ:ಕಂಇ.389.ಮುಅಬಿ.2012 ದಿನಾಂಕ:02/01/2013 ರ ಆದೇಶದ ಪ್ರತಿಯನ್ನು ಪರಿಶೀಲಿಸಿದಲ್ಲಿ ಉಡುಪಿ ತಾಲ್ಲೂಕು ಐರೋಡಿ ಗ್ರಾಮದ ಕಡ್ಡಿ ಮನೆ ಶ್ರೀ ಜುಮಾದಿ ಪಂಜುರ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆಂದು ರೂ.2.00 ಲಕ್ಷ ಮಂಜೂರು ಮಾಡಿರುವುದು ಸ್ಪಷ್ಟ ಪಡುತ್ತದೆ. ಇದಲ್ಲದೇ, ಐರೋಡಿ ಗ್ರಾಮದ ಗುಡ್ಡಿ ಮನೆ ಶ್ರೀಜುಮಾದಿ ಪಂಜುರ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸಂಬಂಧಿಸಿದಂತೆ ಮಂಜೂರಾತಿ ಆದೇಶ ಹಾಗೂ ಸದರಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ ಮಾಹಿತಿ ಕೋರಿ ದೂರುದಾರರು ಅರ್ಜಿ ಸಲ್ಲಿಸಿದ್ದು, ಅದಕ್ಕೆ ಉತ್ತರವಾಗಿ ಸದರಿ

ದೇವಸ್ಥಾನಕ್ಕೆ ಸಂಬಂಧಿಸಿದಂತೆ ಯಾವುದೇ ಮಂಜೂರಾತಿ ಆದೇಶ ಇಲ್ಲವೆಂದು ಹಾಗೂ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲವೆಂದು ಮಾಹಿತಿಯನ್ನು ನೀಡಿರುವುದು ಕಂಡು ಬರುತ್ತದೆ. ಸದರಿ ಮಾಹಿತಿಯನ್ನೊಳಗೊಂಡ ತಿಳುವಳಿಕೆ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಮಾಹಿತಿಯಿಂದ ತಿಳಿದು ಬರುವುದೇನೆಂದರೆ ಐರೋಡಿ ಗ್ರಾಮದ ಗುಡ್ಡಿ ಮನೆ ಶ್ರೀಜುಮಾದಿ ಪಂಜುರ್ಲಿ ದೇವಸ್ಥಾನದವರು ಯಾವುದೇ ಪ್ರಸ್ತಾವನೆಯನ್ನು ಜೀರ್ಣೋದ್ಧಾರಕ್ಕಾಗಿ ಸಲ್ಲಿಸದೇ ಇದ್ದರೂ ಸಹ, ಸದರಿ ದೇವಸ್ಥಾನಕ್ಕೆ ಎದುರುದಾರರು ದೂರುದಾರರ ದೇವಸ್ಥಾನಕ್ಕೆ ಮಂಜೂರಾದ ಹಣವನ್ನು ಚೆಕ್ ಮೂಲಕ ಬಿಡುಗಡೆ ಮಾಡಿರುವುದು ಸ್ಪಷ್ಟ ಪಡುತ್ತದೆ. ಇದರಿಂದ, ಎದುರುದಾರರ ನಿರ್ಲಕ್ಷತನ, ಬೇಜವಾಬ್ದಾರಿತನ ಹಾಗೂ ಉದ್ದೇಶಪೂರ್ವಕ ನಡವಳಿಕೆ ಎಂದು ಕಂಡು ಬರುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ತಾಲ್ಲೂಕು, ಐರೋಡಿ ಗ್ರಾಮದ ಕಡ್ಡಿ ಮನೆ ಶ್ರೀ ಜುಮಾದಿ ಪಂಜುರ್ಲಿ ದೇವಸ್ಥಾನಕ್ಕೆ ಮಂಜೂರಾದ ಹಣವನ್ನು ಸದರಿಯವರಿಗೆ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಬಿಡುಗಡೆ ಮಾಡುವ ಬಗ್ಗೆ ಹಾಗೂ ಐರೋಡಿ ಗ್ರಾಮದ ಗುಡ್ಡಿ ಮನೆ ಶ್ರೀ ಜುಮಾದಿ ಪಂಜುರ್ಲಿ ದೇವಸ್ಥಾನಕ್ಕೆ ಪ್ರಸ್ತಾವನೆ ಇಲ್ಲದೆ ಬಿಡುಗಡೆ ಮಾಡಿರುವ ಹಣವನ್ನು ಹಿಂಪಡೆಯಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

27/2/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 27/2/17